ಟಿಪ್ಪಣಿ

2016–17 ರಂದು ಕರೆದ ಬೀದಿದೀಪಗಳ ನಿರ್ವಹಣಾ ಟೆಂಡರ್‌ನ್ನು ಒಂದು ವರ್ಷದ ಅವಧಿಗೆ ಕಾಮಗಾರಿ ಆದೇಶವನ್ನು ನೀಡಲಾಗಿರುತ್ತದೆ. ತದನಂತರ 2017–18 ನೇ ಸಾಲಿನಲ್ಲಿ ಬೀದಿದೀಪ ನಿರ್ವಹಣೆಗೆ ಹೊಸದಾಗಿ ಟೆಂಡರ್ ಕರೆಯಲು 2017–18 ನೇ ಸಾಲಿನಲ್ಲಿ ನಿಗಧಿಪಡಿಸಿದ ರೂ.200.00 ಲಕ್ಷಗಳು 8 ವಲಯಗಳಿಗೆ ಸಾಲದ ಕಾರಣ ಹೆಚ್ಚುವರಿಯಾಗಿ ಅನುದಾನ ಕೋರಿ ವಿಶೇಷ ಆಯುಕ್ತರು ಯೋಜನೆರವರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಆಯುಕ್ತರ ಅನುಮೋದನೆ ಮೇರೆಗೆ ದಿನಾಂಕ:26/11/2017 ರಂದು ಮಂಡಿಸಲಾಗಿರುತ್ತದೆ. ಆದರೆ ರವರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರು ದಿನಾಂಕ:02/01/2018 ರಂದು ವಿಷಯ ಸಂಖ್ಯೆ:179/17–18 ರನ್ವಯ ಸಂಪೂರ್ಣ ಬೆಂಗಳೂರು ನಗರಕ್ಕೆ ಎಲ್.ಇ.ಡಿ ಬೀದದೀಪಗಳನ್ನು ಅಳವಡಿಸುವ ಯೋಜನೆಯು ಅನುಷ್ಠಾನಗೊಳ್ಳುವವರೆವಿಗೂ ಒಟ್ಟಾರೆ 8 ವಲಯಗಳಿಗೆ ಟೆಂಡರ್‌ಗೆ ಅವಶ್ಯವಿರುವ ಒಟ್ಟು ಮೊತ್ತವನ್ನು 2018–19 ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿಕೊಂಡು ಟೆಂಡರ್ ಕರೆಯಲು ಕ್ರಮ ವಹಿಸುವುದೆಂದು ಅಲ್ಲಿಯವರೆವಿಗೂ ಹಾಲಿ ಪದ್ದತಿಯನ್ನು ಮುಂದುವರೆಸಲು ಸಮಿತಿಯು ತೀರ್ಮಾನಿಸಿತೆಂದು ನಿರ್ಣಯವನ್ನು ನೀಡಿರುತ್ತದೆ.

ಅದರಂತೆ ಪಾಲಿಕೆಯ ದಾಸರಹಳ್ಳಿ ವಲಯದ ವಾರ್ಡ್‌ಗಳ ಬೀದಿದೀಪಗಳ ವಾರ್ಷಿಕ ನಿರ್ವಹಣೆಗಾಗಿ ಪ್ಯಾಕೇಜ್‌ಗಳನ್ನು ಸೃಜಿಸಿ ದಿನಾಂಕ:04/03/2020 ರಂದು ಟೆಂಡರ್ ಕರೆಯಲಾಗಿರುತ್ತದೆ. ಆದರೆ ದಿನಾಂಕ:3/06/2020ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೀರ್ಮಾನವಾದ ಸ್ವನಿರ್ಣಯದಂತೆ ಹಾಲಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಂದ ಬೀದಿದೀಪಗಳ ನಿರ್ವಹನೇಯನ್ನು ಮುಂದುವರೆಸಲು ಹಾಗೂ ಕರೆದಿರುವ ಟೆಂಡರ್‌ನ್ನು ರದ್ದುಗೊಳಿಸಲು ತೀರ್ಮಾನವಾಗಿರುತ್ತದೆ.

ತದನಂತರ 27/11/2020 ರಂದು ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಪ್ರದತ್ತವಾದ ಅಧಿಕಾರದನ್ವಯ ದಿನಾಂಕ:30/06/2020 ರಂದು ಕೌನ್ಸಿಲ್ ತೆಗೆದುಕೊಂಡ ಸ್ವನಿರ್ಣಯವನ್ನು ಊರ್ಜಿತಗೊಳಿಸಿ ಹೊಸ ಟೆಂಡರ್ ಕರೆಯಲು ಆದೇಶಿಸಿರುತ್ತಾರೆ. ಅದರಂತೆ ಈಗ ಹೊಸದಾಗಿ ಟೆಂಡರ್‌ನ್ನು ಕರೆದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ದಿನಾಂಕ: 23.11.2016 ರಂದು ನೀಡಿದ 2016–17 ನೇ ಸಾಲಿನ ಬೀದಿದೀಪಗಳ ನಿರ್ವಹಣೆಯ ಪ್ಯಾಕೇಜ್ D-1 ರಲ್ಲಿ ಒಟ್ಟು 13 ಬಿಲ್ಲುಗಳಾಗಿದ್ದು, ಬಿಲ್ ಮೊತ್ತ ರೂ.79.69.508 ಗಳಾಗಿರುತ್ತವೆ.

ಕಾ.ಪ್ರ.ಅ(ವಿ)
Executive Engineer (Ele)
ಬಿಬ್ಬಿವರ್ಜ್, ದಾಸರಹಳ್ಳಿ ವಲಯ
Bruhath Bangalore Mahanagara Palike
Dasarahalli Zone

Scanned by CamScanner